**SC No. 264/2023**
**PW.-12**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 264/2023**

| | | |
|---|---|---|
| ಸಾಕ್ಷಿದಾರರ ಹೆಸರು | ಹರೀಶ್ | ಪ್ರಮಾಣ ವಚನ ಮಾಡಿದ ದಿನಾಂಕ: 09.10.2025 |
| ತಂದೆಯ/ಗಂಡನ ಹೆಸರು | ವೆಂಕಟಶೆಟ್ಟಿ | |
| ವಯಸ್ಸು | 43 ವರ್ಷ | |
| ವೃತ್ತಿ | ವಾಟರ್ ಮೆನ್ | ಪ್ರಾ.ಸಾಃ 12 |
| ವಾಸ ಸ್ಥಳ | ನಂಜಾಪುರ ಗ್ರಾಮ | ಚಾ.ಸಾಃ 13 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ಶವ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಶವ ಪಂಚನಾಮೆಯನ್ನು ನಿಪಿ.32 ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ.32(ಎ) ಎಂದು ಗುರುತಿಸಲಾಯಿತು. ನಾನು ನಿಪಿ-32 ಕ್ಕೆ ದಿನಾಂಕ 16.07.2023 ರಂದು ಸಹಿ ಮಾಡಿದ್ದೆ. ನಾನು ಊರಿನಲ್ಲಿ ಇದ್ದಾಗ ಹರ್ಷಿತಾ ಎಂಬುವಳು ಮರಣ ಹೊಂದಿರುತ್ತಾಳೆ ಎಂದು ತಿಳಿಸಿದ್ದರು. ಆದ್ದರಿಂದ ನಾನು ದಿನಾಂಕ 16.07.2023 ರಂದು ಕೆ.ಆರ್. ಆಸ್ಪತ್ರೆಗೆ ಹೋಗಿದ್ದೆ, ಕೆ.ಆರ್. ಆಸ್ಪತ್ರೆಯ ಶವಗಾರದಲ್ಲಿ ಹರ್ಷಿತ ಎಂಬುವರ ಶವ ಇತ್ತು. ಆ ಶವಗಾರದಲ್ಲಿ ತಹಶೀಲ್ದಾರ್ ವಿಶ್ವನಾಥ್, ಪೊಲೀಸರು ನನ್ನ ಮುಂದೆ ಮಹಜರ್ ಮಾಡಿದ್ದರು. ಮಹಜರ್ ಕಾಲದಲ್ಲಿ ನನ್ನೊಂದಿಗೆ ಗೀತಮ್ಮ, ಸಂತೋಷ್ ಕುಮಾರ್ ಮತ್ತು ಶಾರದಮ್ಮ ಇದ್ದರು. ಹರ್ಷಿತಾಳ ಬಲ ಕುತ್ತಿಗೆಯ ಹತ್ತಿರ ಚಾಕುವಿನಿಂದ ಕುಯ್ದುದಿತ್ತು

ಬೆನ್ನಿನ ಭಾಗ ಮತ್ತು ಬುಜದಲ್ಲಿ ಚಾಕುವಿನಿಂದ ಕುಯ್ದುದಿತ್ತು ಅದೇ ರೀತಿ ಬಲಕೈ ಮತ್ತು ಬಲ ಹೊಟ್ಟೆ ಯಲ್ಲಿ ಚಾಕುವಿನಿಂದ ಇರಿತ ಮಾಡಿತ್ತು. ನನ್ನ ಮುಂದೆ ಮಹಜರ್ ಮಾಡಿದ್ದರು. ನಾನು ಅದಕ್ಕೆ ಸಹಿ ಮಾಡಿದ್ದೆ. ಆ ಸಮಯದಲ್ಲಿ ಶವವನ್ನು ಶವಪರೀಕ್ಷೆ ಸಲುವಾಗಿ ತೆಗೆದುಕೊಂಡು ಹೋಗಿದ್ದರು. ಮಹಜರ್ ಮಾಡುವ ಸಮಯದಲ್ಲಿ ನನ್ನ ಮುಂದೆ ಫೋಟೋ ತೆಗೆದಿದ್ದರು. ಸಾಕ್ಷಿದಾರರು 2 ಫೋಟೋ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-8 ಮತ್ತು 9 ಎಂದು ಗುರುತಿಸಲ್ಪಟ್ಟಿರುತ್ತವೆ. ಸಾಕ್ಷಿದಾರರು ಶವ ತನಿಖಾ ಕಾಲದಲ್ಲಿ ತೆಗೆದಂತಹ 6 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-20 ಮತ್ತು ನಿಪಿ-22 ರಿಂದ 26 ಎಂದು ಗುರುತಿಸಲ್ಪಟ್ಟಿರುತ್ತವೆ. ಶವ ತನಿಖಾ ಸಮಯದಲ್ಲಿ ಮಾದೇಶ್ ಎಂಬ ವ್ಯಕ್ತಿಯೇ ಹರ್ಷಿತಾಳನ್ನು ಚಾಕುವಿನಿಂದ ಇರಿತ ಮಾಡಿ ಸಾಯಿಸಿರುತ್ತಾನೆ ಎಂದು ತಿಳಿದುಬಂದಿತ್ತು.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ :**

ಆರೋಪಿತರ ಪರ ವಕೀಲರು ಗೈರು ಹಾಜರಿದ್ದು ಆರೋಪಿತನಿಗೆ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು. ಆರೋಪಿತನು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾನೆ.

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಎ ಒ**

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**